## ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ನ್ಯಾಯಾಲಯ, ಹುಣಸೂರು

## ಸಿ.ಸಿ. 19/2018

| | | |
|---|---|---|
| ಸಾಕ್ಷಿ ಹೆಸರು | ಬಿ ಪುಟ್ಟಸ್ವಾಮಿ | ಪ್ರಾ ಸಾ : 8 |
| ತಂದೆ/ಗಂಡನ ಹೆಸರು | ಲೇಟ್ ಬಸವಯ್ಯ | ಚಾ ಸಾ: 11 |
| ವಯಸ್ಸು | 48 ವರ್ಷ | |
| ವೃತ್ತಿ | ನಿವೃತ್ತ ಪೊಲೀಸ್ | |
| ವಾಸಸ್ಥಳ | ಚಾಮರಾಜನಗರ | |

ಸಾಕ್ಷಿಗೆ ದಿನಾಂಕ: 01.07.2025 ರಂದು ಪ್ರಮಾಣ ವಚನ ನೀಡಲಾಯಿತು

ಮುಖ್ಯ ವಿಚಾರಣೆ: ಶ್ರೀ ಎ ಪಿ ಪಿ ರವರಿಂದ

ನಾನು ದಿನಾಂಕ 03.12.2015 ರಿಂದ **09.09.2018** ರವೆರಗೆ ಹುಣಸೂರು ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಪಿ.ಎಸ.ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು.

ದಿ.11.11.2017 ರಂದು ಬೆಳಿಗ್ಗೆ 9.30 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಗಣಿಕಿಕೃತ ದೂರನ್ನು ಸಲ್ಲಿಸಿದ ಮೇರೆಗೆ ದೂರನ್ನು ಸ್ವೀಕರಿಸಿಕೊಂಡು ಠಾಣಾ ಮೊ. ಸಂಖ್ಯೆ 585/2017 ರಲ್ಲಿ ಕಲಂ 143,147,148,341,324,323, 506 ಸಹ ಕಲಂ 149 ಐ.ಪಿ.ಸಿ ರೀತಿಯ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ-1 ನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಪ್ರ.ವ ವರದಿಯನ್ನು ತೋರಿಸಲಾಗಿ ಸಾಕ್ಷಿ ಪ್ರ. ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು, ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ಬೆಳಿಗ್ಗೆ 11.30 ರಿಂದ 12.15 ಗಂಟೆಯವರೆಗೆ ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ಚಾ ಸಾ-8 ಮತ್ತು 9 ರ ಸಮಕ್ಷಮ ನಿಪಿ-2 ರಂತೆ ಸ್ಥಳ

ಮಹಜರ್ ಕ್ರಮ ಜರುಗಿಸಿ, ಮು ಮಾ-1 ಮತ್ತು 2 ನ್ನು ಜಪ್ತಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಮು ಮಾ-1 ಮತ್ತು 2 ನ್ನುನೋಡಿ ಗುರುತಿಸಿರುತ್ತಾರೆ.

ನಂತರ ಚಾಸಾ-5 ಮತ್ತು 7 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಠಾಣೆಗೆ ಬಂದು ವಶಪಡಿಸಿಕೊಂಡ ಮು.ಮಾಲುಗಳನ್ನು ಠಾಣಾ ಮು.ಮಾಲು ಪಟ್ಟಿ 361/2017 ರಲ್ಲಿ ನಮೂದಿಸಿ ನ್ಯಾಯಾಲಯದ ಅನುಮತಿ ಪಡೆದುಕೊಂಡಿರುತ್ತೇನೆ. ದಿನಾಂಕ 17.11.2017 ರಂದು ಆರೋಪಿತರು ಠಾಣೆಗೆ ಹಾಜರಾದ ಮೇರೆಗೆ ಅವರನ್ನು ವಿಚಾರಿಸಿ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಮುಚ್ಚಳಿಕೆ ಬರೆಸಿಕೊಂಡು ಠಾಣಾ ಜಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿಃ11.11.2017 ರಂದು ಚಾಸಾ-1 ರವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ22.11.2017 ರಂದು ಚಾಸಾ2 ರಿಂದ 4 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ದಿನಾಂಕ 23.11.2017 ರಂದು ಚಾಸಾ-2 ರಿಂದ 4 ರವರ ನಿಪಿ-3 ರಿಂದ 5 ರಂತೆ ಪಡೆದುಕೊಂಡಿರುತ್ತೇನೆ. ಸಾಕ್ಷಿಗೆ ನಿಪಿ-3 ರಿಂದ 5 ನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-3(ಬಿ), 4(ಬಿ) , 5(ಬಿ) ಎಂದು ಗುರುತಿಸಲಾಯಿತು.

ನಂತರ ದಿಃ04.12.2017 ರಂದು ಚಾಸಾ-10 ರವರಿಗೆ ಹೆಚ್ಚುವರಿ ಅಭಿಪ್ರಾಯ ಕೋರಿ ಪತ್ರ ಬರೆದಿರುತ್ತೇನೆ. ದಿಃ06.12.2017 ರಂದು ಚಾಸಾ-10 ರವರು ನಿಪಿ-6 ರಂತೆ ಹೆಚ್ಚುವರಿ ಅಭಿಪ್ರಾಯ ನೀಡಿರುತ್ತಾರೆ. ಸಾಕ್ಷಿಗೆ ನಿಪಿ-6 ನ್ನು ತೋರಿಸಲಾಗಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ-6(ಬಿ) ಎಂದು ಗುರುತಿಸಲಾಯಿತು. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ದ ಆರೋಪ ಸಾಭಿತ ಆಗಿರುವುದರಿಂದ ನ್ಯಾಯಾಲಯಕ್ಕೆ ದೊ.ಪಟ್ಟಿ ಸಲ್ಲಿಸಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್. ಪಿ ವಕೀಲರಿಂದ**

ಚಾಸಾ-1 ರವರು ನೀಡಿದ ದೂರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನಿಪಿ-1 ರಲ್ಲಿ ಜಾಗದ ವಿಚಾರವಾಗಿ ಗಲಾಟೆ ಆಗಿರುತ್ತದೆಂದು ನಮೂದು ಮಾಡಿರುತ್ತದೆಂದರೆ ಸರಿ. ಜಾಗದ ವಿಚಾರವಾಗಿ ಸಿವಿಲ್ ವ್ಯಾಜ್ಯ ವಿಚಾರಣೆಗೆ ಬಾಕಿ ಇದೆಯಾ ಎಂದು ನಾನು ವಿಚಾರಿಸಿರುತ್ತೇನೆ ಆದರೆ

ಚಾಸಾ-1 ರವರು ಯಾವುದೇ ಉತ್ತರ ನೀಡಿಲ್ಲ. ನಮ್ಮ ಠಾಣೆಯಿಂದ ಸರ್ಕಾರಿ ಆಸ್ಪತ್ರೆ ಸುಮಾರು 1/2 ಕಿ.ಮೀ ಅಂತರದಲ್ಲಿದೆ. ಎಮ್.ಎಲ್.ಸಿ ಆದಾಗ ಆಸ್ಪತ್ರೆಯಿಂದ ನಮಗೆ ಮಾಹಿತಿ ಬರುತ್ತದೆಂದರೆ ಸರಿ. ನಮಗೆ ಆಸ್ಪತ್ರೆಯಿಂದ ಯಾವುದೇ ಎಮ್.ಎಲ್.ಸಿ ಬಂದಿಲ್ಲ ಎಂದರೆ ಸರಿ. ನಿಪಿ-7 ರಲ್ಲಿ ಘಟನೆ ನಡೆದ ದಿನಾಂಕವನ್ನು ದಿ:08.09.2017 ಎಂದು ನಮೂದಾಗಿದೆಂದರೆ ಸರಿ ಸಾಕ್ಷಿ ಕಣ್ಣು ತಪ್ಪಿನಿಂದ ಆ ರೀತಿ ನಮೂದಾಗಿದೆಂದು ನುಡಿಯುತ್ತಾರೆ. ತಡವಾಗಿ ದೂರು ನೀಡಿದ ಬಗ್ಗೆ ದೂರಿನಲ್ಲಿ ಊರಿನಲ್ಲಿ ಪಂಚಾಯಿತಿ ಮಾಡಿ ನಂತರ ದೂರು ನೀಡಿರುವುದಾಗಿ ನಮೂದು ಮಾಡಲಾಗಿದೆ. ಚಾಸಾ-1 ರವರು ಮಾತ್ರ ದೂರು ನೀಡಲು ಬಂದಿದ್ದರು. ದೂರನ್ನು ಎಲ್ಲಿ ಬೆರಳಚ್ಚು ಮಾಡಿರುತ್ತಾರೋ ನನಗೆ ಗೊತ್ತಿಲ್ಲ. ನಿಪಿ-2 ಕ್ಕೆ ಅಕ್ಕಪಕ್ಕದವರನ್ನು ಪಂಚರಾಗಿ ಬರುವಂತೆ ಕೇಳಿರುತ್ತೇವೆ ಆದರೆ ಯಾರೂ ಸಹ ಸಹಕರಿಸಲಿಲ್ಲ. ಪಂಚರಿಗೆ ನೋಟೀಸ್ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ನ್ನು ಠಾಣೆಯಲ್ಲಿ ಕುಳಿತುಕೊಂಡು ಬರೆದಿರುತ್ತೇವೆಂದರೆ ಸರಿಯಲ್ಲ. ಚಾಸಾ-1 ರವರು ಮು.ಮಾ-1 ಮತ್ತು 2 ನ್ನು ಹಾಜರುಪಡಿಸಿಲ್ಲ ಸ್ಥಳದಲ್ಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ನನ್ನ ಮುಂದೆ ಯಾವುದೇ ಮರು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-2 ರಿಂದ 4 ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ದಿನ ನಾನು ಚಾಸಾ-5 ರವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-3 ರಿಂದ 6 ನ್ನು ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ. ಚಾಸಾ-1 ರವರು ನೀಡಿದ ಸುಳ್ಳು ದೂರಿಗೆ ಸಹಾಯವಾಗಲಿ ಎಂದು ನಾನು ಸರಿಯಾಗಿ ತನಿಖೆಯನ್ನು ಮಾಡದೆ ಆರೋಪಿತರ ವಿರುದ್ಧ ಸುಳ್ಳು ದೊ.ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣಕ್ಕೂ ಆರೋಪಿತರಿಗೆ ಯಾವುದೇ ಸಂಬಂದವಿಲ್ಲ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸರಿಯಾಗಿ ಪರೀಶಿಲನೆ ಮಾಡದೆ ತರಾತುರಿಯಲ್ಲಿ ಸುಳ್ಳು ದೊ.ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ. ಓ. ಹೇ. ಸ. ಒ.**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ**
ಹುಣಸೂರು.